O.S. No.245/18 P.W. 1 Dated :12-09-2022.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ.ಕೆ.ಎನ್. ವಕೀಲರಿಂದಃ-

ಮ್ಯುಟೇಶನ್ ಆದೇಶ ಮಾಡುವ ವೇಳೆಯಲ್ಲಿ ಸಾಕ್ಷಿದಾರರ ಹೇಳಿಕೆ ಪಡೆದಿರುತ್ತೇನೆಂದು ನಿಡಿ-1 ರಲ್ಲಿ ನಮೂದಿಸಿದ್ದು , ಅದಕ್ಕೆ ಯಾರು ಯಾರು ಸಾಕ್ಷಿದಾರರಾಗಿ ಹೇಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸಾರ್ವಜನಿಕರು ಮತ್ತು ಅಕ್ಕಪಕ್ಕದ ಜಮೀನಿನ ಮಾಲೀಕರು ಸಾಕ್ಷ್ಯಿ ನುಡಿದಿರುತ್ತಾರೆ. ದಾವಾ ಸ್ವತ್ತಿನ ಅಕ್ಕಪಕ್ಕ ನಾಗಮ್ಮ ಮತ್ತು ಚನ್ನಯ್ಯ ರವರ ಜಮೀನು ಗಳಿವೆ . ನಾಗಮ್ಮ ಮತ್ತು ಚನ್ನಯ್ಯ ರವರ ಹೇಳಿಕೆ ಪಡೆದುಕೊಂಡಿದ್ದರೆ ಎಂದರೆ ಸಾಕ್ಷಿಯು ತುಂಬಾ ವರ್ಷಗಳಾದ ಕಾರಣ ನನಗೆ ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸಾರ್ವಜನಿಕರು ಸುಮಾರು 50 ಜನ ಸೇರಿದ್ದು , ಅವರಲ್ಲಿ ಎಷ್ಟು ಜನರ ಹೇಳಿಕೆ ಪಡೆದಿದ್ದರು ಮತ್ತು ಯಾರು ಯಾರು ಸಹಿ ಮಾಡಿದ್ದರು ಎಂದು ನನಗೆ ತಿಳಿದಿಲ್ಲ. ಮ್ಯುಟೇಶನ್ ನಡವಳಿಕೆಗೆ ಯಾರು ಯಾರು ಸಾಕ್ಷಿದಾರರಾಗಿ ಹೇಳಿಕೆ ನೀಡಿರುತ್ತಾರೆ, ಅದಕ್ಕೆ ಸಂಬಂಧಿಸಿದ ತಾಲ್ಲೋಕು ಕಚೇರಿಯಿಂದ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸರಿ . ತಹಸೀಲ್ದಾರ್ ರವರ ಸಮಕ್ಷಮ ಹೇಳಿಕೆ ಪಡೆದುಕೊಂಡಿರುತ್ತಾರೆ. ಖಾತೆ ಬದಲಾವಣೆ ಮಾಡುವ ಮೊದಲು ಜಮೀನಿನ ಮಾಲೀಕರಿಗೆ ನೋಟೀಸು ನೀಡಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತಿನ ಮಾಲೀಕರಾದ ಬಸವೇಗೌಡರಿಗೆ ಖಾತೆ ಬದಲಾಗುವ ಮೊದಲು ನೋಟೀಸು ನೀಡಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಮ್ಯುಟೇಶನ್ ನಡವಳಿಕೆಗೆ ಸಂಬಂಧಿಸಿದಂತೆ ನೋಟೀಸು ನೀಡಿರುವುದು , ಸಾಕ್ಷಿದಾರರ ಹೇಳಿಕೆ ಪಡೆದಿರುವ ದಾಖಲೆಗಳು ತಾಲ್ಲೋಕು ಪಂಚಾಯಿತಿಯಲ್ಲಿ ಲಭ್ಯವಿದ್ದು , ಅದನ್ನು ಪಡೆದು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ವೆಂಕಟೇಶ ಎಂದು ನಮೂದಾಗಿದ್ದು, ಸೀಲು ಮತ್ತು ಇಲಾಖೆಯ ಮೊಹರು ಇರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮಾಲೀಕರಾದ ಬಸವೇಗೌಡರಿಂದ ಒಪ್ಪಿಗೆ ಪತ್ರ ಪಡೆದುಕೊಂಡಿರುವುದಿಲ್ಲ. ನಾನು ದಾವಾ ಸ್ವತ್ತಿನಲ್ಲಿ

ಸ್ವಾಧೀನ ದಲ್ಲಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವ ಬಗ್ಗೆ ನನಗೆ ಗೊತ್ತಿಲ್ಲ.

ದಿಃ14-05-1992 ರಿಂದ ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನವಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ನಾನು ಸ್ವಾಧೀನದಲ್ಲಿರುವುದೇ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಒಬ್ಬ ವ್ಯಕ್ತಿ ಸ್ವಾಧೀನದಲ್ಲಿದ್ದರೆ ಸರ್ವೆಯರ್ ರವರು ಸ್ವತ್ತನ್ನು ಅಳತೆ ಮಾಡಿ ಸ್ಕೆಚ್ ನೀಡುತ್ತಾರೆ ಎಂದರೆ ಸರಿ . ದಾವಾ ಸ್ವತ್ತಿನ ಸರ್ವೆ ಮಾಡಿಸಿರುತ್ತೇನೆ. 1992 ರಲ್ಲಿ ದಾವಾ ಸ್ವತ್ತಿನ ಸರ್ವೆ ಸ್ಕೆಚ್ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಬೇಕಾದಲ್ಲಿ ಪಡೆದುಕೊಳ್ಳುವುದಾಗಿ ನುಡಿಯುತ್ತಾರೆ. ದಿಃ14-05-1992 ಕ್ಕೂ ಮೊದಲು ಮತ್ತು ಆನಂತರ ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿರುವ ಬಗ್ಗೆ ಕಂದಾಯ ಅಧಿಕಾರಿಗಳನ್ನು ಸ್ಥಳ ಪರಿಶೀಲನೆ ಮಾಡಿ ದಾಖಲೆ ನೀಡುವಂತೆ ಕೋರಿಕೊಂಡಿರುವುದಿಲ್ಲ. 1993 ರಿಂದ ದಾವಾ ಸ್ವತ್ತಿನ ಕಂದಾಯವನ್ನು ಪಾವತಿ ಮಾಡುತ್ತಿದ್ದೇನೆ , ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಿಃ10-07-1995 ರಂದು ಬಸವೇಗೌಡರು ಮರಣ ಹೊಂದಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದ 1997 ರಲ್ಲಿ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. 1997 ರಲ್ಲಿ ಬಸವೇಗೌಡರು ಮರಣ ಹೊಂದಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಬಸವೇಗೌಡರು 1995 ರಲ್ಲೇ ಮರಣ ಹೊಂದಿರುವುದರಿಂದ ನಿಡಿ-1 ರಂತೆ ಮ್ಯುಟೇಶನ್ ನಡಾವಳಿಗೆ ಬಸವೇಗೌಡರು ಹೇಳಿಕೆ ನೀಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿಯೊಂದು ವ್ಯವಹಾರಗಳಲ್ಲಿ ನಾನು  ದಾಖಲೆಗಳನ್ನು ಸೃಷ್ಟಿ ಮಾಡಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನಾನು ಅವಿದ್ಯಾವಂತ . ಜೇನು ಕೃಷಿಗಾಗಿ ನಾನು ತೋಟಗಾರಿಕೆ ಇಲಾಖೆಗೆ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ . ಆ ಅರ್ಜಿಯಲ್ಲಿ ನಾನು ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಮಾಡಿದ್ದೇನೆಂದು ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಾಣೇಹಳ್ಳಿ  ಗ್ರಾಮದಲ್ಲಿ ದಿಃ18-06-1953 ರಲ್ಲಿ ನಾನು ಶಾಲೆಗೆ ದಾಖಲಾಗಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗಾಗಿ ಮಧ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.